(ಆದೇ ಸಂದರ್ಭದಲ್ಲಿ ನೀಲಕಂಠಪ್ಪನವರು ಮತ್ತು ವೆಂಕಟರಾಮಯ್ಯನವರು ಜೊತೆಯಲ್ಲೇ ಮಾತನಾಡುತ್ತಿದ್ದರು.)

ಅಧ್ಯಕ್ಷರು.—ನೀವು ಮೂರು ಮಂದಿ ಮಾತನಾಡಿದರೆ ಯಾರ ಮಾತು ನಾನು ಕೇಳಬೇಕು ?

ಶ್ರೀ ಬಿ.ಎ. ಉಮರಬ್ಬ.—ಆ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದರೆ ಅದು ಸರಿಯಿಲ್ಲ. ಪ್ರತಿ ಸಾರಿ ಅಸೆಂಬ್ಲಿ ನಡೆದಾಗಲೂ ವಿಧಾನಸೌಧದ ಮುಂದೆ ರಸ್ತೆ ಮೇಲೆ ಬಂದು ಅವರು ಕುಳಿತುಕೊಳ್ಳುವ ಪರಿಸ್ಥಿತಿ ಇದೆ. ಹಾಗಾದರೆ ಈ ಸರ್ಕಾರಕ್ಕೆ ಶಿಕ್ಷಕರ ಅವಶ್ಯಕತೆ ಇಲ್ಲವೇ ? ಮಂತ್ರಿಗಳು ಅವರ ಜೊತೆ ಮಾತನಾಡುತ್ತೇನೆ ಎಂದು ಹೇಳುತ್ತಾರೆ. ಅವರು ಮಾತನಾಡಿದರೆ ಏನಾಗುತ್ತದೆ?

ಅಧ್ಯಕ್ಷರು.—ನೀಲಕಂಠಪ್ಪನವರೇ, ತಾವು ತಮ್ಮ ನೋಟೀಸ್ ಓದ್ರಿ.

ಶ್ರೀ ಬಿ.ಎ ಉಮರಬ್ಬ:—ಮೂರು ಗಂಟೆಯಿಂದ ೪ ಗಂಟೆವರೆಗೆ ಅವರಿಗೆ ಮಾತನಾಡಲು. ಟೈಮ್ ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ಅವರು ಏನು ಮಾತನಾಡುವುದು ? You know what are their problems. You know what they want.

SRI M CHANDRASHEKAR.—I don't know anything. They will come and represent.

MR. SPEAKER.—Nothing will go on record.

(ಗೊಂದಲ)

ಅಧ್ಯಕ್ಷರು.—ನೀವು ಹೀಗೆ ಯದ್ವಾತದ್ವಾ ಮಾತನಾಡಿದರೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಂತ್ರಿಗಳು ಹೇಳಿದ್ದಾರೆ. ತಾವು ಕೂಡ್ರಿ. ನಾನು ಸಭೆ ನಡೆಸಬೇಕೋ ಬೇಡವೋ ?

(ಮತ್ತೆ ಉಮರಬ್ಬನವರು ಮಾತನಾಡುವುದಕ್ಕೆ ನಿಂತರು.)

MR. SPEAKER.—Nothing will go on record.

ಅಧ್ಯಕ್ಷರು.—ಉತ್ತರ ತರಿಸಿಕೊಡುತ್ತೇನೆ ಕೂಡ್ರಿ. ನೀಲಕಂಠಪ್ಪನವರೇ, ತಾವು ಓದ್ರಿ.

ಶ್ರೀ ಬಿ.ಆರ್. ನೀಲಕಂಠಪ್ಪ. — ಅಧ್ಯಕ್ಷರೇ.....

ಶ್ರೀ ಬಿ.ಎಸ್. ಯಡಿಯೂರಪ್ಪ.—ಪ್ರತಿ ವರ್ಷ ಈ ವಿಚಾರ ಬರುತ್ತಿದೆ. ಸರ್ಕಾರ ತೀರ್ಮಾನ ತೆಗೆದುಕೊಳ್ಳದಿದ್ದರೆ ಹೇಗೆ ? ಇದಕ್ಕೆ ಅಂತಿಮ ಹಾಡು ಹಾಡಬೇಕಲ್ಲ ?

ಶ್ರೀ ಆರ್. ವೆಂಕಟರಾಮಯ್ಯ.—ರಘುಪತಿಯವರು ಈಗಾಗಲೇ ಆಶ್ವಾಸನೆ ಕೊಟ್ಟಿದ್ದಾರೆ, ಆ ಮೇಲೆ ಅವರ ನಂತರ ಬಂದ ಮಂತ್ರಿಗಳೂ ಆಶ್ವಾಸನೆ ಕೊಟ್ಟಿದ್ದಾರೆ. ನಾಲ್ಕು ಜನ ಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದಾರೆ: ದಯವಿಟ್ಟು ನೀವೂ ಹಾಗೇ ಮಾಡಬೇಡಿ. ಅವರು ಕೊಟ್ಟ ಭರವಸೆಯನ್ನು ಫುಲ್‌ಫಿಲ್ ಮಾಡಿ.

ಅಧ್ಯಕ್ಷರು.— ನೀಲಕಂಠಪ್ಪನವರೇ ಓದ್ರಿ.

೧೭) ತರೀಕೆರೆ ತಾಲ್ಲೂಕಿನ ಜಮ್ಮೇವಳ್ಳ ಜಲಾಶಯಕ್ಕೆ ಓದೀರನ ಹಳ್ಳದಿಂದ ನೀರನ್ನು ಒದಗಿಸುವ ಯೋಜನೆಯನ್ನು ಕಾರ್ಯ ರೂಪಕ್ಕೆ ತರುವುದರು.

ಶ್ರೀ ಬಿ.ಆರ್. ನೀಲಕಂಠಪ್ಪ — ತರೀಕೆರೆ ತಾಲ್ಲೂಕಿನ ಜಮ್ಮೇದಳ್ಳ ಜಲಾಶಯಕ್ಕೆ ಓದೀರನಹಳ್ಳದಿಂದ ನೀರು ಒದಗಿಸುವ ಬಗ್ಗೆ ಯೋಜನೆ ರೂಪಿತವಾಗಿದ್ದು ಈಗಾಗಲೇ ಶಂಕುಸ್ಥಾಪನೆ ಕಾರ್ಯ ಒಂದು ವರ್ಷದ ಹಿಂದೆಯೇ ಆಗಿದ್ದು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಂಬಂಧಪಟ್ಟ ಇಂಜಿನಿಯರ್ ವಿಭಾಗವು ಟೆಂಡರ್ ಕರೆದು ಕಾರ್ಯರೂಪಕ್ಕೆ ತರಲು ತಯಾರಿದ್ದು ಈಗ ಅರಣ್ಯ ಇಲಾಖೆಯವರಿಂದ ಸುಮಾರು ೫ ಹೆಕ್ಟೇರ್ ಜಮೀನನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಇದರ ಬಗ್ಗೆ ಹಲವಾರು ಸಾರಿ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದರೂ ಈ ಯೋಜನೆ ಕಾರ್ಯರೂಪಕ್ಕೆ

ಬಂದಿರುವುದಿಲ್ಲ. ಆದ್ದರಿಂದ ಯಾವಾಗ ಅರಣ್ಯ ಇಲಾಖೆಯವರಿಂದ ಜಮೀನನ್ನು ಬಿಡಿಸಿಕೊಡುವಿರಿ. ಈ ಮೂರು ಕೋಟಿ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಹಕಾರ ನೀಡುವಿರಾ ? ಈ ಸದನದ ಮೂಲಕ ಮಾನ್ಯ ಅರಣ್ಯ ಸಚಿವರನ್ನು ೫ ಎಕರೆ ಜಮೀನು ಬಿಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ.—ಉತ್ತರ ತರಿಸಿಕೊಡುತ್ತೇನೆ.

ಅಧ್ಯಕ್ಷರು.—ಉಮರಬ್ಬ ಆದರೇ ನೀವು ಓದಿ.

ಶ್ರೀ ಬಿ.ಎ. ಉಮರಬ್ಬ.—ಇದಕ್ಕೆ ಉತ್ತರ ಸರಿಗೆ ಮಂತ್ರಿಯವರು ಉತ್ತರ ಹೇಳುತ್ತಾರಾ ? ಏಕೆಂದರೆ ಅವರು ಕೆ.ಎಸ್.ಆರ್.ಟಿ.ಸಿ. ಬಸ್ ತರಹ ಆಗಿಬಿಟ್ಟಿದ್ದಾರೆ.

ಅಧ್ಯಕ್ಷರು.—ನೀವು ಓದಿ.

೧೮) ಬಂಟ್ವಾಳ ತಾಲ್ಲೂಕಿನ ಪುದು ಗ್ರಾಮದ ಅಮ್ಮೆಮಾರ್‌ಗೆ ಕುಡಿಯುವ ನೀರನ್ನು ಪೂರೈಸುವುದು.

ಶ್ರೀ ಬಿ. ಎ. ಉಮರಬ್ಬ.—ಬಂಟ್ವಾಳ ತಾಲ್ಲೂಕಿನ ಪುದು ಗ್ರಾಮದ 'ಅಮ್ಮೆಮಾರ್' ಗೆ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಪುದು ಗ್ರಾಮದ ನೀರು ಸರಬರಾಜು ಯೋಜನೆಯ ನೀರು ಅಮ್ಮೆಮಾರ್‌ಗೆ ಪೂರೈಸಲು ಎರಡು ತಡೆಗಳಿವೆ. (೧) ನೀರಿನ ಪೈಪುಗಳು ರೈಲ್ವೆ ಹಳಿಯಾಡಿ ಹೋಗಬೇಕಾಗಿದ್ದು ರೈಲ್ವೆ ಅಧಿಕಾರಿಗಳು ಇದಕ್ಕೆ ಅನುಮತಿ ಕೊಡುತ್ತಿಲ್ಲ. (೨) ದೊರಕಿರುವ ನೀರು ಮಾರಿಪಳ್ಳ–ಪರಂಗಿಪೇಟೆಗೇ ಕಡಿಮೆಯಾಗಿದೆ, ಈ ಕಾರಣದಿಂದ ಅಮ್ಮೆಮಾರಿನಲ್ಲೇ ಇನ್ನೊಂದು ಬೋರ್‌ವೆಲ್ ಮಾಡಿ ಅಲ್ಲಿನ ಟ್ಯಾಂಕಿಗೆ ನೀರು ಒದಗಿಸುವ ತುರ್ತು ಕ್ರಮ ಕೈಗೊಳ್ಳಬೇಕು.

ವಿಟ್ಲಾ ಫಿರ್ಕಾದ ಉಕ್ಕರದಲ್ಲಿ ಕುಡಿಯುವ ನೀರಿನ ವ್ಯವಸ್ಥೆಯೇ ಇಲ್ಲ. ಇದನ್ನು ನೀಗಿಸುವ ಒಂದು ಮಿನಿ ವಾಟರ್ ಸಪ್ಲೈ ಸ್ಕೀಮನ್ನು ಅಗತ್ಯವಾಗಿ ಮಾಡಬೇಕಾಗಿದೆ.

ಪುದು ಗ್ರಾಮದ ಕುಂಡೀಲು ಹರಿಜನ ಕಾಲೋನಿ ಮತ್ತು ಪಡು ಗ್ರಾಮದ ತಲೆಮೊಗರು ಕೂರು ರಸ್ತೆಯ ಬಳಿ ಕುಡಿಯುವ ನೀರಿನ ವ್ಯವಸ್ಥೆಯು ತೀವ್ರ ಅವಶ್ಯಕವಿದ್ದು ಈ ಬಗ್ಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ತೀವ್ರ ಗಮನ ಹರಿಸಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ.—ಇದಕ್ಕೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಬಿ.ಎ. ಉಮರಬ್ಬ.—ಅದಕ್ಕೆ ನಾನು ಕೆ.ಎಸ್.ಆರ್.ಟಿ.ಸಿ. ಬಸ್ಸು ಎಂದು ಹೇಳಿದ್ದು. ಬಸ್ಸಿನಲ್ಲಿ ೬೦ ಜನ ಅಂದರೆ ೧೦೦ ಜನ ಹತ್ತಿಕೊಳ್ಳುವುದಕ್ಕಾಗುತ್ತದೆ.

ಅಧ್ಯಕ್ಷರು. ಭಾಷಣ ಬೇಡ್ರಿ.

SRI B.A. UMARABBA.—What are the answers he has given for all the previous questions ?

ಅಧ್ಯಕ್ಷರು.—ಅದರ ಮೇಲೆ ಭಾಷಣ, ಚರ್ಚೆ ಇಲ್ಲ.

SRI B.A. UMARABBA.—When the Minister can't give answers why should he bear it ?

(ಗೊಂದಲ)

ಅಧ್ಯಕ್ಷರು.—ರೂಲಿಂಗ್ಸ್ ರೆಗ್ಯುಲೇಷನ್ಸ್ ಯಾವುದೂ ನಿಮಗೆ ಗೊತ್ತಿಲ್ಲ ತಾವು ಕೂಡ್ರಿ.

(ಗೊಂದಲ)